**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**
**ಸಿ.ಸಿ. ನಂ. 199/2024**

ಫಿರ್ಯಾದಿಃ ಅಕ್ಷಯ ಕೋ-ಆಪರೇಟಿವ್‌ಕ್ರೆಡಿಟ್ ಸೊಸೈಟಿ (ಲಿ)
ಹೊನ್ನಾವರ, ನಿಷ್ಪತ್ ಮ್ಯಾನೇಜರ್,
ಶ್ರೀ ಅನಿಲ್ ಎಫ್ ಬ್ರಿಟ್ಟೊ
ಹೊನ್ನಾವರ

**-ವಿರುದ್ಧ-**

ಆರೋಪಿ ಇಬ್ರಾಹಿಂ ಯುಸೂಫ್ ಸಾಬ್
ವಯಸ್ಸುಃ 60 ವರ್ಷ,
ಸಾಕೀನಃ ಪುರಭವನ ಮುನ್ಸಿಪಲ್ ಹಾಲ್ ಹತ್ತಿರ
ಪ್ರಭಾತನಗರ, ತಾಲೂಕುಃ ಹೊನ್ನಾವರ.

**<u>ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ಅಡಿಯಲ್ಲಿ ದಾಖಲು ಮಾಡಿಕೊಂಡ ಆರೋಪಿಯ ಹೇಳಿಕೆ</u>**

ಪ್ರಶ್ನೆ 1: ನೀವು ಪಿರ್ಯಾದಿಯವರ ಪರವಾಗಿ ಫ್ರಾಸಾ-1 ರವರ ಹೇಳಿಕೆಯನ್ನು ಕೇಳಿದ್ದೀರಾ?
ಉತ್ತರಃ

ಪ್ರಶ್ನೆ2: ಫ್ರಾಸಾ-1ರವರು ತಮ್ಮ ಸಾಕ್ಷ್ಯದಲ್ಲಿ, ತಮ್ಮ ಸಂಸ್ಥೆಯಲ್ಲಿ ಆರೋಪಿಯಾದ ನೀವು ದಿನಾಂಕಃ 13-02-2019 ರಂದು ರೂ. 1,00,000/- ಗಳನ್ನು ಸಾಲವಾಗಿ ಪಡೆದುಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?
ಉತ್ತರಃ

ಪ್ರಶ್ನೆ3: ಫ್ರಾಸಾ-1ರವರು ಮುಂದುವರಿದು, ಮಹಮ್ಮದ್ ಅಲಿ ಸಹೇದ್ ರವರು ದಿನಾಂಕಃ 18-03-2019 ರಂದು 1,00,000/- ವನ್ನು, ಹುಸ್ಸೇನ್ ಅಬ್ದುಲ್ ರೆಹಮಾನ್ ಸಾಬರವರು ದಿನಾಂಕಃ 30-03-2019 ರಂದು ರೂ. 85,000/- ವನ್ನು ಹಾಗೂ ಆರೀಫ್ ಫಕೀರ್ ಸಾಹೇಬ್ ರವರು ದಿನಾಂಕಃ 07-08-2021 ರಂದು ರೂ. 1,00,000/- ವನ್ನು ಫಿರ್ಯಾದಿ ಸಂಸ್ಥೆಯಿಂದ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಮೂವರು ಪಡೆದ ಸಾಲಕ್ಕೆ ಆರೋಪಿಯಾದ ನೀವು ಜಾಮೀನುದಾರನಾಗಿ ಒಪ್ಪಿ ಸಹಿ ಮಾಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ4: ಫಿರ್ಯಾದಿ-1ರವರು ಮುಂದುವರಿದು, ಆರೋಪಿಯಾದ ನೀವು ಪಡೆದ ಸಾಲಕ್ಕೆ ಹಾಗೂ ಜಾಮೀನುದಾರನಾಗಿ ಒಪ್ಪಿ ಸಹಿ ಮಾಡಿದ ಮೂವರ ಸಾಲದ ಹಣಕ್ಕೂ ಸಹ ಜವಾಬ್ದಾರನಾಗಿದ್ದು, ಸದರಿ ಸಾಲವನ್ನು ಸರಿಯಾಗಿ ಕಂತಿನ ಪ್ರಕಾರ ಮರು ಪಾವತಿಸುವುದಾಗಿ ಒಪ್ಪಿಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ5: ಫಿರ್ಯಾದಿ-1ರವರು ಮುಂದುವರಿದು, ನಂತರ ತಾನು ಸಾಲವನ್ನು ಮರುಪಾವತಿಸುವಂತೆ ಕೇಳಿದಾಗ ದಿನಾಂಕಃ 29-01-2022 ರಂದು ಆರೋಪಿಯು ತಾನು ಪಡೆದ ಸಾಲ ಮರುಪಾವತಿಗಾಗಿ ಹಾಗೂ ಜಾಮೀನುದಾರನಾಗಿ ಒಪ್ಪಿ ಸಹಿ ಮಾಡಿದ ಮೂವರ ಸಾಲದ ಹಣಕ್ಕೆ ಸಂಬಂಧಿಸಿ ತನ್ನ ಖಾತೆ ಹೊಂದಿರುವ ಕೆನರಾ ಬ್ಯಾಂಕ್ ಹೊನ್ನಾವರ ಶಾಖೆಯ ಚೆಕ್ ನಂ.114673 ನಂಬರಿನ ಚೆಕ್ಕನ್ನು ಸಹಿ ಮಾಡಿ ತನಗೆ ನೀಡಿ ಸಾಲದ ಮೊಬಲಗನ್ನು ಪಡೆದುಕೊಳ್ಳುವಂತೆ ತಿಳಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ6: ಫಿರ್ಯಾದಿ-1ರವರು ಮುಂದುವರಿದು, ತಾನು ಆರೋಪಿತನಾದ ನೀವು ನೀಡಿದ ಚೆಕ್ಕನ್ನು ದಿನಾಂಕಃ01-02-2022 ರಂದು ನಗದೀಕರಣಕ್ಕಾಗಿ ಇಂಡೀಯನ್ ಓವರ್ ಸೀಸ್ ಬ್ಯಾಂಕ್ ಹೊನ್ನಾವರ ಶಾಖೆಯಲ್ಲಿ ಹಾಜರುಪಡಿಸಿದಾಗ "ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದಿರುವುದಾಗಿ" ಸದ್ರಿ ಚೆಕ್ ನಗದೀಕರಣಗೊಳ್ಳದೇ ಬ್ಯಾಂಕಿನ ಅಧಿಕಾರಿಗಳು ಲಿಖಿತ ಹಿಂಬರಹವನ್ನು ನೀಡಿ ವಾಪಸ್ಸು ಮಾಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ7: ಫಿರ್ಯಾದಿ-1ರವರು ಮುಂದುವರಿದು, ನಂತರ ತಾನು ತಮ್ಮ ವಕೀಲರ ಮೂಲಕ ದಿನಾಂಕಃ08-02-2022 ರಂದು ಆರೋಪಿಗೆ ಈ ಬಗ್ಗೆ ತಾನು ನೋಟಿಸ್ ಕಳುಹಿಸಿದ್ದು ಸದರಿ ನೋಟೀಸು ದಿನಾಂಕಃ10-02-2022 ರಂದು ನಿಮಗೆ ತಲುಪಿದ್ದು ಇದುವರೆಗೂ ಹಣ ಪಾವತಿ ಮಾಡಿಲ್ಲ ಎಂಬುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ8: ಫ್ರಾಸಾ-1 ರವರು ಮುಂದುವರಿದು, ಆರೋಪಿಯು ಸದರಿ ಅವಧಿಯೊಳಗೆ ಹಣವನ್ನು ಮರು ಪಾವತಿಸದೇ ತನ್ನ ಖಾತೆಯಲ್ಲಿ ಹಣ ಇಲ್ಲದೇ ಇದ್ದರೂ ಸಹ ಉದ್ದೇಶಪೂರಕವಾಗಿ ತನಗೆ ವಂಚನೆ ಮಾಡುವ ಉದ್ದೇಶದಿಂದಲೇ ನಗದೀಕರಣವಾಗದ ಚೆಕ್ಕನ್ನು ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?
ಉತ್ತರಃ

ಪ್ರಶ್ನೆ.9: ನಿಮಗೆ ಇನ್ನೇನಾದರೂ ಹೇಳುವುದು ಇದೆಯೇ?
ಉತ್ತರಃ

ಪ್ರಶ್ನೆಃ.10: ನಿಮ್ಮ ಪರವಾಗಿ ಯಾವುದಾದರೂ ಮೌಖಿಕ ಅಥವಾ ದಾಖಲಾತಿ ಸಾಕ್ಷ್ಯ ಇರುತ್ತದೆಯೇ?
ಉತ್ತರಃ

(ಮೇಲೆ ಹೇಳಿದ ಸಾಕ್ಷಿದಾರರು ನುಡಿದಿರುವ ಸಾಕ್ಷ್ಯವನ್ನು ಆರೋಪಿಗೆ ಓದಿ ಹೇಳಿದ್ದು, ಅವರು ನೀಡಿದ ಉತ್ತರವನ್ನು ನನ್ನ ಹಸ್ತಾಕ್ಷರಗಳಿಂದ ಬರೆದು ಕೊಳ್ಳಲಾಯಿತು ಅಂತಾ ಈ ಮೂಲಕ ದೃಡೀಕರಿಸುತ್ತೇನೆ.)

Sd/-

**ದಿನಾಂಕಃ** 09-07-2025.

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**